ಪ್ರಾರ್ಥನೆ

# ಶ್ರೀವಿವೇಕಾನಂದ ಸುಪ್ರಭಾತಮ್ – ೧

**ಹೇ ಪ್ರೇಷ್ಠ ನಾಥ ಸುಮಹನ್ ಯುಗಶಕ್ತಿಧಾರಿನ್**
**ಹೇ ನಿತ್ಯಮುಕ್ತ ಸತತಂ ಹಿ ಮಹಾವರೇಣ್ಯ ।**
**ಆನಂದರೂಪ ಭುವಿ ವೈ ಜನಮುಗ್ಧಕಾರಿನ್**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೧ ॥**

ಪ್ರೀತಿಪಾತ್ರನೂ ಮಹಾತ್ಮನೂ ಆದ ಈ ಯುಗದ ಶಕ್ತಿಧಾರಿ ಒಡೆಯನೆ, ನಿತ್ಯಮುಕ್ತನೂ ಸರ್ವೋತ್ಕೃಷ್ಟನೂ ಆದ ಆನಂದ ಸ್ವರೂಪಿಯೆ, ಭೂಮಿಯಲ್ಲಿ ನಿನ್ನ (ಆಕಾರ, ಗುಣ, ಜ್ಞಾನ, ಶಕ್ತಿ, ಪ್ರಭಾವ ಮೊದಲಾದವುಗಳಿಂದ) ಜನರನ್ನು ಮುಗ್ಧಗೊಳಿಸಿದ ವಿಶ್ವವೀರನೇ, ಯತಿಶ್ರೇಷ್ಠನೇ, ನಿನಗೆ ಸುಪ್ರಭಾತ.

**ಹೇ ಬುದ್ಧ ಶಾಶ್ವತವಿವೇಕ ಸುಬೋಧದಾಯಿನ್**
**ಸತ್ಯಾಶ್ರಯಿನ್ ಜನಗಣಾನ್ ಪಥದಾನಕಾರಿನ್ ।**
**ಹೇ ಮುಕ್ತ ಸರ್ವಜನಮುಕ್ತಿವಿಧಾನಕಾರಿನ್**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೨ ॥**

ಶಾಶ್ವತ ತತ್ತ್ವದ ಜ್ಞಾನವನ್ನೂ ವಿವೇಕವನ್ನೂ ಲೋಕಕ್ಕೆ ಅನುಗ್ರಹಿಸುವವನೇ, ಸತ್ಯವನ್ನೇ ಆಶ್ರಯಿಸಿ ಜನಸಮೂಹವನ್ನು ಸನ್ಮಾರ್ಗಕ್ಕೆ ತಂದ ಜ್ಞಾನಿಯೇ, ಎಲ್ಲರಿಗೂ ಮುಕ್ತಿಮಾರ್ಗವನ್ನು ತೋರಿಸಿಕೊಟ್ಟ ಮುಕ್ತಸ್ವರೂಪಿಯೇ, ವಿಶ್ವವೀರನೇ, ಯತಿಶ್ರೇಷ್ಠನೇ, ನಿನಗೆ ಸುಪ್ರಭಾತ.

**ಭಕ್ತಿಶ್ಚ ತೇ ಸುವಿದಿತಾ ಭುವಿ ರಾಮಕೃಷ್ಣೇ**
**ಶ್ರೀರಾಮಕೃಷ್ಣಹೃದಿ ಹೇ ಸುಕೃತಾಧಿಕಾರ ।**
**ಹೇ ಮಾತೃಭಕ್ತ ಪೃಥಿವೀವಿಜಯೀ ಧ್ರುವಂ ತ್ವಂ**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೩ ॥**

ಶ್ರೀರಾಮಕೃಷ್ಣರಲ್ಲಿ ನಿನಗಿರುವ ಭಕ್ತಿ ಲೋಕದಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಶ್ರೀರಾಮಕೃಷ್ಣರ ಹೃದಯದಲ್ಲಿ ಸ್ಥಾನ ಪಡೆದ ಪುಣ್ಯವಂತನೆ, ಭೂಮಂಡಲದಲ್ಲಿ ವಿಜಯ ಸಾಧಿಸಿದ ನೀನು ಲೋಕದಲ್ಲಿ ನಿತ್ಯನು. ವಿಶ್ವವೀರ, ಯತಿಶ್ರೇಷ್ಠನೇ, ನಿನಗೆ ಸುಪ್ರಭಾತ.



**ಹೇ ಶುದ್ಧ ಪೂತ ಭುವನೇ ಶುಚಿತಾವಿಧಾತಾ**
**ರಿಕ್ತಾರ್ತಪೀಡಿತಜನೇಶ್ವರಬುದ್ಧಿಕಾರಿನ್ ।**
**ನಿತ್ಯಂ ಕೃಪಾಗಲಿತಹೃತ್ ಪರದುಃಖಹಾರಿನ್**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೪ ॥**

ಸ್ವಯಂ ಶುದ್ಧನೂ ಪವಿತ್ರನೂ ಆದ ನೀನು ಲೋಕದಲ್ಲಿ ಶುಚಿಯು ನೆಲೆಸುವಂತೆ ಮಾಡಿದೆ. ದೀನ-ದರಿದ್ರ-ರೋಗಿಗಳಲ್ಲಿ ಈಶ್ವರಭಾವವನ್ನು ಕಂಡ ಮಹಾತ್ಮನೆ, ಸದಾ ಕರುಣಾ ರಸವನ್ನು ದ್ರವಿಸುವ ಹೃದಯವುಳ್ಳವನೆ, ಇತರರ ದುಃಖವನ್ನು ದೂರ ಮಾಡುವ ವಿಶ್ವವೀರನೇ, ಯತಿಶ್ರೇಷ್ಠನೇ, ನಿನಗೆ ಸುಪ್ರಭಾತ.

— ಸ್ವಾಮಿ ಜೀವಾನಂದ

ಸೂಕ್ತಿಪ್ರಭ

## ಬುದ್ಧ ಸೂಕ್ತಿಗಳು

**ಸ**ತ್ಯದ ಮೇಲಿನ ಪ್ರೀತಿಯಿಂದಾಗಿ ಪ್ರಾಮಾಣಿಕನಾದವನು ಅನೈತಿಕತೆಯಿಂದ ಪಾರಾಗುತ್ತಾನೆ. ಚೆನ್ನಾಗಿ ಪಳಗಿಸಿದ ಆನೆ ಶಾಂತಗೊಂಡು ತನ್ನ ಮೇಲೆ ರಾಜನನ್ನೇ ಹತ್ತಿಸಿಕೊಳ್ಳುವಂತೆ, ಧರ್ಮಾತ್ಮನು ತನ್ನ ಜೀವನದುದ್ದಕ್ಕೂ ವಿಧೇಯತೆಯಿಂದ ವರ್ತಿಸುತ್ತಾನೆ.

**ಆ**ತ್ಮಜಯವೆಂದರೆ ಅದು ಮನುಷ್ಯನ ಆತ್ಮವನ್ನೇ ನಾಶ ಮಾಡುವುದಲ್ಲ; ಅದನ್ನು ಸ್ಥಿರಗೊಳಿಸುವುದು. ಆತ್ಮವನ್ನು ಗೆದ್ದವನು ನಿಜವಾಗಿ ಬದುಕಲು ಅರ್ಹನಾದವನು. ಅವನು ಹೆಚ್ಚು ವಿಜಯಶಾಲಿಯಾಗುವನು, ಆತ್ಮನನ್ನು ಗೆಲ್ಲದವನಿಗಿಂತ ಹೆಚ್ಚು ಯಶಸ್ಸನ್ನು ಗಳಿಸುವನು.

**ಪ್ರಶ್ನೆ:** ದುಃಖದ ನಿವಾರಣೆಯ ಮಾರ್ಗ ಯಾವುದು?

**ಬುದ್ಧ :** ಪವಿತ್ರವಾದ ಅಷ್ಟಾಂಗ ಮಾರ್ಗವು ದುಃಖದ ನಿವಾರಣೆಯತ್ತ ನಮ್ಮನ್ನು ಕೊಂಡೊಯ್ಯುವುದು. ಸ್ನೇಹಿತರೆ, ದುಃಖವನ್ನು, ಅದರ ಮೂಲವನ್ನು, ಅರಿತುಕೊಂಡು, ಅನಂತರ ದುಃಖದ ನಿವಾರಣೆಯನ್ನು ತಿಳಿಯುವ ಸುಸಂಸ್ಕೃತನಾದ ಯುವಕನು ಆಸಕ್ತಿಯನ್ನು ತ್ಯಜಿಸುತ್ತಾನೆ. ಕ್ರೋಧವನ್ನು ಶಮನಗೊಳಿಸುತ್ತಾನೆ. 'ನಾನು' ಎಂಬ ಅಹಂಕಾರವನ್ನು ನಿರ್ಮೂಲನ ಮಾಡಿ, ಅಜ್ಞಾನವನ್ನು ನಾಶಮಾಡುತ್ತಾನೆ. ಕೊನೆಗೆ ಜ್ಞಾನೋದಯವನ್ನು ಪಡೆಯುತ್ತಾನೆ, ಅವನು ಈ ಜನ್ಮದಲ್ಲೇ ಎಲ್ಲ ದುಃಖಗಳ ನಿವಾರಣೆಯನ್ನು ಮಾಡಿಕೊಳ್ಳುತ್ತಾನೆ.